**BANGALORE WATER SUPPLY AND SEWERAGE BOARD**
**ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ**

ಸಂ:ಬೆಂಜಮಂ/ಅ/ಪ್ರಮುಅ/ಮು.ಅ(ನಿ)/ १२०७२ /2016-17 ದಿನಾಂಕ: 31/1/2017

<u>**ಸುತ್ತೋಲೆ**</u>

ವಿಷಯ: ನೀರು ಮತ್ತು ಒಳಚರಂಡಿ ಸಂಪರ್ಕವನ್ನು ಮಂಜೂರು ಮಾಡಲು ಆನ್‌ಲೈನ್ ಮೂಲಕ ಸಂಪೂರ್ಣ ದಾಖಲೆಗಳೊಂದಿಗೆ ಅರ್ಜಿಗಳನ್ನು ಸ್ವೀಕರಿಸುವ ಬಗ್ಗೆ.

ಉಲ್ಲೇಖ: 1. ಕಚೇರಿ ಸೂಚನೆ ಸಂಖ್ಯೆ: ಬೆಂಜಮಂ/ಪ್ರಮುಅ/10396/16-17 ದಿ:23.12.2016
2 ಸುತ್ತೋಲೆ ಸಂಖ್ಯೆ: ಬೆಂಜಮಂ/ಅ/ಪ್ರಮುಅ/ಮುಅ(ನಿ)/11791/16-17 ದಿನಾಂಕ:24.01.2017

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ಕಾರ್ಯನಿರ್ವಾಹಕ ಅಭಿಯಂತರರು ಮತ್ತು ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ಸಾರ್ವಜನಿಕರಿಂದ ಸ್ವೀಕರಿಸುವ ನೀರಿನ ಮತ್ತು ಒಳಚರಂಡಿ ಸಂಪರ್ಕದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಪ್ರಕ್ರಿಯೆ ಮಾಡಲು ಸೂಚನೆಗಳನ್ನು ಈಗಾಗಲೇ ಉಲ್ಲೇಖಿತ ಪತ್ರ (1)ರಲ್ಲಿ ನೀಡಲಾಗಿದೆ. ಆದರೆ ಇಲ್ಲಿಯವರೆಗೆ ಸೂಕ್ತ ಪ್ರಗತಿ ಸಾಧಿಸಿರುವುದಿಲ್ಲ.

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಮುದ್ರಿತ ಅರ್ಜಿಗಳನ್ನು ಸ್ವೀಕರಿಸುವುದನ್ನು ದಿನಾಂಕ:14.02.2017ರಿಂದ ನಿಲ್ಲಿಸಲು ಆದೇಶಿಸಲಾಗಿದೆ ಮತ್ತು ದಿನಾಂಕ: 15.02.2017ರಿಂದ ಎಲ್ಲಾ ಅರ್ಜಿಗಳನ್ನು ಆನ್‌ಲೈನ್ ಮುಖಾಂತರವೇ ಸ್ವೀಕರಿಸಿ, ಪ್ರಕ್ರಿಯೆ ಮಾಡತಕ್ಕದ್ದು.

ಉಪವಿಭಾಗದಲ್ಲಿ ಈ ಪ್ರಕ್ರಿಯೆಗೆ ಪ್ರತ್ಯೇಕವಾಗಿ ಒಂದು ಗಣಕಯಂತ್ರ ಮತ್ತು ಇದಕ್ಕೆ ಸಂಬಂಧಿಸಿದ ಎಲ್ಲಾ ಸೌಲಭ್ಯಗಳನ್ನು ಕಲ್ಪಿಸಿ, ಸಾರ್ವಜನಿಕರಿಗೆ ಯಾವುದೇ ತೊಂದರೆಯುಂಟಾಗದಂತೆ ಮತ್ತು **'ಸಕಾಲ'** ಕಾಲಮಿತಿಯಲ್ಲಿಯೇ ಸಂಪರ್ಕವನ್ನು ಮಂಜೂರು ಮಾಡಲು ಕ್ರಮವಹಿಸುವುದು. ಅರ್ಜಿದಾರರಿಗೆ ಆನ್‌ಲೈನ್ ಮುಖಾಂತರ ಪ್ರಕ್ರಿಯೆ ಮಾಡಲು ಸರಿಯಾದ ರೀತಿಯಲ್ಲಿ ಸಹಕರಿಸುವುದು ಮತ್ತು ಅನಾವಶ್ಯಕವಾಗಿ ಅರ್ಜಿಗಳನ್ನು ತಿರಸ್ಕರಿಸಬಾರದು. ಈ ವಿಷಯದಲ್ಲಿ ಯಾವುದೇ ಉದಾಸೀನ ಅಥವಾ ಅಲಕ್ಷತನ ಅಥವಾ ವಿನಾ ಕಾರಣ ವಿಳಂಬ ತೋರಿದಲ್ಲಿ, ಸಂಬಂಧಪಟ್ಟವರ ಮೇಲೆ ಮಂಡಳಿಯ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದು.

ಅಧ್ಯಕ್ಷರು,
ಬೆಂಗಳೂರು ಜಲಮಂಡಳಿ.

ಪ್ರತಿಯನ್ನು:

1. ಪ್ರಧಾನ ಮುಖ್ಯ ಅಭಿಯಂತರರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
2. ಮುಖ್ಯ ಅಭಿಯಂತರರು (ನಿ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
3. ಮು.ಆ.ಅ-ಕಾ ಹಾಗೂ ಆ.ಸ ಮತ್ತು ಮು.ಲೆ.ಅ ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
4. ಅಮುಅ(ನಿ)-1, ಅಮುಅ(ನಿ)-2, ಅಮುಅ(ನಿ)-3, ಅಮುಅ(ನಿ)-4 ಅಮುಅ(ಕಂದಾಯ) ರವರ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.
5. ಉಮುಅ(ನಿ)-1, ಉಮುಅ(ನಿ)-2, ಕಾನಿಅ(ಆರ್.ಬಿ.ಸಿ), ನಿರ್ವಹಣಾ ವಲಯದ ಎಲ್ಲಾ ಕಾನಿಅ ಮತ್ತು ಸಕಾನಿಅ ರವರ ಸೂಕ್ತ ಕ್ರಮಕ್ಕಾಗಿ.
6. ಸಾರ್ವಜನಿಕ ಸಂಪರ್ಕಾಧಿಕಾರಿ ರವರ ಮಾಹಿತಿಗಾಗಿ ಹಾಗೂ ಸದರಿ ವಿಷಯವನ್ನು ಸಾರ್ವಜನಿಕರ ಗಮನಕ್ಕೆ ತರಲು ಮಾಧ್ಯಮಗಳ ಮುಖಾಂತರ ಕಡ್ಡಾಯವಾಗಿ ಪ್ರಕಟಿಸಲು ಸೂಚಿಸಲಾಗಿದೆ.
7. ತಾ.ಸ-1, ತಾ.ಸ-2 ಮತ್ತು ತಾ.ಸ-3 ರವರ ಮುಂದಿನ ಕ್ರಮಕ್ಕಾಗಿ.